## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆಃ 740/2024

**ಸಾಕ್ಷಿಯನ್ನು ದಿಃ 30.12.2025 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ಮಹದೇವ | ಸಿಡಬ್ಲ್ಯೂಃ 8 | ಪಿಡಬ್ಲ್ಯೂಃ 7 |
| ತಂದೆಯ ಹೆಸರು | ಜವರಯ್ಯ | | |
| ವಯಸ್ಸು | 50 ವರ್ಷ | | |
| ಕೆಲಸ | ವ್ಯವಸಾಯ , | | |
| ವಾಸಸ್ಥಳ | ಬೀಜಗನಹಳ್ಳಿ , ಹುಣಸೂರು. | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ಸಾಕ್ಷಿ ನಿಪಿ-2 ರ ಮಹಜರಿನಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-2 (ಸಿ) ಎಂದು ಗುರುತಿಸಲಾಯಿತು. ಸುಮಾರು 3-4 ತಿಂಗಳ ಹಿಂದೆ ನಮ್ಮ ಊರಿನ ಚಾಸಾ-2 ರವರ ಮನೆಗೆ ಪೊಲೀಸರು ಬಂದಿದ್ದರು. ಅಲ್ಲಿ ಪೊಲೀಸರು ನನ್ನನ್ನು ಕರೆದು ಮಹಜರಿಗೆ ಬಂದಿದ್ದೇವೆ ಸಹಿ ಹಾಕಿ ಎಂದು ಹೇಳಿದರು. ಮಹಜರು ಮಾಡಿದಾಗ ಸಂಜೆ 4.00 ಗಂಟೆ ಆಗಿರಬಹುದು. ನನ್ನ ಜೊತೆ ನಿಪಿ-2 ಕ್ಕೆ ಚಾಸಾ-7 ರವರು ಸಹಿ ಹಾಕಿದರು. ಯಾವ ಉದ್ದೇಶಕ್ಕೆ ನಿಪಿ-2 ರ ಮಹಜರು ಮಾಡಲಾಗಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ದಾಖಲೆಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆಯೇ ಇಲ್ಲವೇ ಗೊತ್ತಿಲ್ಲ. ಸಾಕ್ಷಿ ನಿಪಿ-4ರ ಭಾವಚಿತ್ರದಲ್ಲಿ ತನ್ನನ್ನು ಗುರುತಿಸುತ್ತಾರೆ. ನಿಪಿ-4 ರ ಭಾವಚಿತ್ರವನ್ನು ಚಾಸಾ-2 ರವರ ಮನೆಯಲ್ಲಿ ತೆಗೆಯಲಾಯಿತು. ಸಾಕ್ಷಿ ನಿಪಿ-3ರ ಮಹಜರಿನಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-3(ಸಿ) ಎಂದು ಗುರುತಿಸಲಾಯಿತು. ಸದರಿ ಮಹಜರನ್ನು ಯಾವಾಗ , ಎಲ್ಲಿ , ಯಾವ ಉದ್ದೇಶಕ್ಕೆ ಮಾಡಿದ್ದೇನೆಂದು ಗೊತ್ತಿಲ್ಲ. ನಿಪಿ-3ಕ್ಕೆ ಸಹಿ

ಹಾಕುವ ಸಮಯದಲ್ಲಿ ಚಾಸಾ-7 ರವರು ನನ್ನ ಜೊತೆ ಇದ್ದರು. ನಿಪಿ-2 ಮತ್ತು 3 ರಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)**

**<u>ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ</u>**

ನಿಪಿ-2 ಮತ್ತು 3 ರ ಮಹಜರನ್ನು ಆರೋಪಿತರು ಮತ್ತು ಚಾಸಾ-1 ರವರ ಮಧ್ಯೆ ಗಲಾಟೆಯಾದ ವಿಚಾರದಲ್ಲಿ ಮಾಡಲಾಗಿದೆ ಎಂದರೆ ಸರಿ. ನಿಪಿ-2 ಮತ್ತು 3 ರ ಮಹಜರ್ ಕಾಲಕ್ಕೆ ಚಾಸಾ-1 ರವರು ಹಾಜರಿದ್ದು ಸ್ಥಳ ತೋರಿಸಿದ್ದಾರೆ ಎಂದರೆ ಗೊತ್ತಿಲ್ಲ. ನಿಪಿ-2 ರ ಮಹಜರ್ ಕಾಲಕ್ಕೆ ಚಾಸಾ-1 ರವರು ಹಾಜರುಪಡಿಸಿದ ನಿಪಿ-5 ರಿಂದ 9 ರ ದಾಖಲೆಗಳನ್ನು ಪೊಲೀಸರು ನನ್ನ ಸಮಕ್ಷಮ ಅಮಾನತ್ತು ಪಡಿಸಿಕೊಂಡರು ಎಂದರೆ ಸರಿಯಲ್ಲ. ನಿಪಿ-2 ರ ಮಹಜರನ್ನು ಮಧ್ಯಾಹ್ನ 1.00 ರಿಂದ 2.00 ಗಂಟೆಯವರೆಗೆ ಪೊಲೀಸರು ಬರೆದರು ಎಂದರೆ ಗೊತ್ತಿಲ್ಲ. ಅದೇ ರೀತಿ ನಿಪಿ -3 ರ ಮಹಜರನ್ನು ಮಧ್ಯಾಹ್ನ 2.15 ರಿಂದ 3.15 ರವರೆಗೆ ಮಾಡಲಾಗಿದೆ ಎಂದರೆ ಗೊತ್ತಿಲ್ಲ. ನನಗೆ ನಿಪಿ-2 ಮತ್ತು 3 ರ ಮಹಜರ್ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಕೂಡ ಆರೋಪಿತರು ನನ್ನ ಊರಿನವರು ಆದ ಕಾರಣ ಅವರಿಗೆ ಸಹಾಯ ಮಾಡಬೇಕೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಜೆ ಎಸ್ ಎ ವಕೀಲರಿಂದಃ**

ಇಲ್ಲ ಎನ್ನುತ್ತಾರೆ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.